**<u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ವಿರಾಜಪೇಟೆ</u>**

**<u>ಓ.ಎಸ್. ಸಂಖ್ಯೆ ಃ 17/2023</u>**

**ಡಿಡಬ್ಲ್ಯು- 1**

**<u>ದಿನಾಂಕ ಃ 13-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**ಪಾಟಿ ಸವಾಲು ಃ ವಾದಿ ಪರ ಶ್ರೀಮತಿ. ಎನ್ ಎಂ ಸಿ ವಕೀಲರಿಂದ ಃ**

1. ನನ್ನ ತಂದೆಯ ಹೆಸರು ಕುಕ್ರಪ್ಪ ಎಂದರೆ ಸರಿ. ನನ್ನ ತಂದೆಗೆ ಮೂರು ಜನ ಮಕ್ಕಳು. ಅದರಲ್ಲಿ ಒಬ್ಬರು ಮೃತರಾಗಿರುತ್ತಾರೆ. ಇನ್ನೊಬ್ಬರು ಜೀವಂತ ಇರುತ್ತಾರೆ. ನಾನು ಯಡೂರು ಗ್ರಾಮದಲ್ಲಿ ಹುಟ್ಟಿ ಬೆಳದಿರುತ್ತೇನೆ. ನನ್ನ ತಂದೆ ಕರ್ನಲ್ ಮಾದಪ್ಪ ಅವರ ಕಾಫೀ ಎಸ್ಟೇಟ್ ನ ಲೈನ್ ಮನೆಯಲ್ಲಿ ಕುಟುಂಬ ಸಮೇತ ವಾಸವಿದ್ದರು ಎಂದರೆ ಸರಿ. ನನ್ನ ತಂದೆ ಕರ್ನಲ್ ಮಾದಪ್ಪ ರವರ ಕಾಫೀ ಎಸ್ಟೇಟ್ ನಲ್ಲಿ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ನನ್ನ ತಂದೆ ಅವಿದ್ಯಾವಂತರು ಆಗಿದ್ದರು ಎಂದರೆ ಸರಿ. ನನ್ನ ತಂದೆ ಕರ್ನಲ್ ಮಾದಪ್ಪ ರವರ ಕಾಫೀ ಎಸ್ಟೇಟ್ ನಲ್ಲಿ ಹೊರತುಪಡಿಸಿ, ಬೇರೆ ಯಾವುದೇ ಎಸ್ಟೇಟ್ ನಲ್ಲಿ ಕೆಲಸಕ್ಕೆ ಹೋಗಿರುವುದಿಲ್ಲ ಎಂದರೆ ಸರಿ. ಕರ್ನಲ್ ಮಾದಪ್ಪ ರವರಿಗೆ ನೂರಾರು ಎಕರೆ ಕಾಫಿ ಎಸ್ಟೇಟ್ ಇರುತ್ತದೆ ಎಂದರೆ ಸರಿ. ಸದರಿಯವರ ಎಸ್ಟೇಟ್ ನಲ್ಲಿ ನೂರಾರು ಕಾರ್ಮಿಕರುಗಳು ಕೆಲಸಕ್ಕೆ ಇರುತ್ತಾರೆ ಎಂದರೆ ಸರಿ.

2. ಕರ್ನಲ್ ಮಾದಪ್ಪ ರವರಿಂದ ಮಾನ್ಯ ಪಿ ಚಿದಂಬರಂ ರವರು ಎಸ್ಟೇಟ್ ನ್ನು ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿ. ವಾದಿಯ ತಾಯಿ ಕರ್ನಲ್ ಮಾದಪ್ಪ ರವರ ಮಕ್ಕಳಾದ ಮುತ್ತಣ ಹಾಗೂ ತಿಮ್ಮಯ್ಯರವರಿಂದ 34 ಎಕರೆ ಕಾಫೀ ಎಸ್ಟೇಟ್ ನ್ನು ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿ. ಮಂಡೆಪಂಡ ಉತ್ತಪ್ಪರವರು ನನ್ನ ತಂದೆಗೆ 40 ಸೆಂಟ್ ಜಾಗವನ್ನು ದಾನ ಮಾಡಿರುತ್ತಾರೆ ಎಂದರೆ ಸರಿ. 40 ಸೆಂಟ್ ಜಾಗ ಯಾವ ಕಾರಣಕ್ಕಾಗಿ ನನ್ನ ತಂದೆಗೆ ದಾನ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನನ್ನ ತಂದೆಯವರು ಹಲವಾರು ವರ್ಷಗಳಿಂದ ಕರ್ನಲ್ ಮಾದಪ್ಪ ರವರ ಗದ್ದೆಯಲ್ಲಿ ಕೆಲಸ ಮಾಡಿಕೊಂಡಿದ್ದ ಆ ಕಾರಣಕ್ಕಾಗಿ ಸದರಿ ಜಾಗವನ್ನು ದಾನ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

3. ದಾನಪತ್ರ ಸೃಷ್ಟಿ ಮಾಡಿದ ದಾಖಲೆ ಎಂದು ಹೇಳಿ ನನ್ನ ವಿರುದ್ದ ಸಬ್ ರಿಜಿಸ್ಟರ್ ಕಛೇರಿಯಲ್ಲಿ ವಿಚಾರಣೆ ನಡೆಯುತ್ತಿದೆ ಎಂದರೆ ಸರಿ. ಮಂಡೆಪಂಡ ಉತ್ತಪ್ಪರವರು ಹಚ್ಚಿನಾಡು ಗ್ರಾಮಕ್ಕೆ ಸೇರಿದವರು ಎಂದರೆ ಸರಿ. ನನ್ನ ಮನೆಯಿಂದ ಸದರಿಯವರ ಮನೆ 3 ಕಿ ಮೀ ಅಂತರದಲ್ಲಿದೆ ಎಂದರೆ ಸರಿ. ಮಂಡೆಪಂಡ ಉತ್ತಪ್ಪರವರು ಜಿಲ್ಲಾ ಪಂಚಾಯಿತಿ ಅಧ್ಯಕ್ಷರಾಗಿದ್ದು, ಸದರಿಯವರು ರಾಜಕೀಯವಾಗಿ ಗುರುತಿಸಿಕೊಂಡಿದ್ದರು ಎಂದರೆ ಸರಿ.

ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟಿ ಸವಾಲಿಗೆ ಸಮಯಾವಕಾಶವನ್ನು ಕೋರಿದ್ದು, ಸಮಯಾವಕಾಶವನ್ನು ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

ಸಹಿ/-
(ಪ್ರದೀಪ ಪೋತದಾರ)
ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ವಿರಾಜಪೇಟೆ.